ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಬುಧವಾರ, ದಿನಾಂಕ ೩ನೇ ಫೆಬ್ರುವರಿ ೧೯೮೮ ಮಾಘ ೧೪, ೧೯೦೯ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಪೀಠವನ್ನು ಅಲಂಕರಿಸಿದರು]

ವಿಧಾನ ಪರಿಷತ್ತಿನಲ್ಲಿ ಕಾಂಗ್ರೆಸ್ (ಐ) ಸದಸ್ಯರನ್ನು ಅಮಾನತ್ತುಗೊಳಿಸಿದ ವಿಷಯದ ಬಗ್ಗೆ

ಅಧ್ಯಕ್ಷರು.— ಪ್ರಶ್ನೋತ್ತರ...

ಶ್ರೀ ಬಿ ಎಸ್. ಯಡಿಯೂರಪ್ಪ. ಮಾನ್ಯ ಅಧ್ಯಕ್ಷರೆ, ಕಾಂಗ್ರೆಸ್ (ಐ) ಪಕ್ಷದ ವಿಧಾನ ಪರಿಷತ್ತಿನ ಹಾಗೂ ವಿಧಾನ ಸಭೆಯ ಮಾನ್ಯ ಸದಸ್ಯರುಗಳು ಇವೊತ್ತು ವಿಧಾನಸೌಧದ ಮುಂದೆ ಕುಳಿತು ಧರಣಿ ಸತ್ಯಾಗ್ರಹ ಮಾಡುತ್ತಾ ಇದ್ದಾರೆ.

ನಮ್ಮ ಈ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ವಿಧಾನ ಪರಿಷತ್ತಿನ ಹಾಗೂ ವಿಧಾನ ಸಭೆಯ ಒಳಗಡೆ ಕುಳಿತು ಸದಸ್ಯರಾದವರು ರಾಜ್ಯದ ಅಭಿವೃದ್ಧಿಯ ಬಗ್ಗೆ ಬೇಕಾದ ಸಲಹೆ ಸೂಚನೆಗಳನ್ನು ಕೊಡುವುದು, ರಾಜ್ಯದಲ್ಲಿ ನಡೆದ ಅನ್ಯಾಯಗಳ ಬಗ್ಗೆ ಸರಕಾರಕ್ಕೆ ಎತ್ತಿ ತೋರಿಸಿಕೊಡುವುದು, ಇನ್ನೂ ಮುಂದುವರಿದು ಸರ್ಕಾರದ ಲೋಪದೋಷಗಳ ಬಗ್ಗೆ ಹೇಳುವಂಥಾದ್ದಕ್ಕೆ ಅವರಿಗೆ ಅವಕಾಶ ಇದೆ. ಆ ಒಂದು ಪದ್ಧತಿಯನ್ನು ಬಿಟ್ಟು ಇವೊತ್ತು ಜನತೆಯ ಹೊಗಳಿಕೆಗೆ ಪಾತ್ರರಾಗಬೇಕೆಂದು ತಾವು ಒಂದು ತಂತ್ರವನ್ನು ಏನು ಮಾಡುತ್ತಿದ್ದೀರಿ ಇದರಿಂದ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯಾವುದೇ ಸಫಲತೆಯನ್ನು ತಾವು ಕಾಣುವುದಕ್ಕೆ ಆಗುವುದಿಲ್ಲ. ರಾಜ್ಯದ ಜನತೆ ಹಲವಾರು ರೀತಿಯಲ್ಲಿ ತೊಂದರೆಗೆ ಈಡಾಗಿರುವ ಈ ಸಂದರ್ಭದಲ್ಲಿ ಸದನದ ಒಳಗಡೆ ನಾವೆಲ್ಲರೂ ಅನೇಕ ವಿಷಯಗಳ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ನಡೆದಂತಹ ಲೋಪದೋಷಗಳನ್ನು ಸರ್ಕಾರದ ಗಮನಕ್ಕೆ ತಂದು ಅನ್ಯಾಯ ಆಗದ ಹಾಗೆ ನೋಡಿಕೊಳ್ಳುವ ಒಂದು ಕಣ ಇದಾಗಬೇಕು. ಮೇಲ್ಮನೆಯ ಸದಸ್ಯರು ಅಪಮಾನತ್ತುಗೊಳಿಸಿದ್ದಾರೆಂಬ ಒಂದು ಕಾರಣಕ್ಕಾಗಿ ಈ ಸಭೆಗೂ ಬಹಿಷ್ಕಾರ ಹಾಕುವ ಅವರ ಏಕಪಕ್ಷೀಯ ನಿಲುವು ಏನಿದೆ ಅದನ್ನು ನಾನು ಸಮರ್ಥನೆ ಮಾಡುತ್ತೇನೆ ಎಂದಲ್ಲ. ಆದರೂ ಇಷ್ಟೊಂದು ವರ್ಷಗಳ ಕಾಲ ಅಧಿಕಾರದಲ್ಲಿದ್ದು, ಪ್ರಭಲವಾಗಿರತಕ್ಕಂಥ ಈ ಪಕ್ಷದವರಿಗೆ ಹೀಗೆ ವಾಡಬಾರದು ಎಂದು ನಾನು ಹೇಳುತ್ತಾ, ಅವರು ಈಗಲಾದರೂ ಒಳಗಡೆ ಬಂದು ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕೆಂದು ತಮ್ಮ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ. ಹಾಗೆಯೇ ನಮ್ಮ ಆಡಳಿತ ಪಕ್ಷದವರು ಸಹ ಇದನ್ನು ಪ್ರತಿಷ್ಠೆಯಾಗಿ ತೆಗೆದುಕೊಳ್ಳಬಾರದು ಮಾನ್ಯ ಮುಖ್ಯ ಮಂತ್ರಿಗಳು ಕೇವಲ ಅವರ ಪಕ್ಷಕ್ಕೆ ಮಾತ್ರ ನಾಯಕರು ಅಲ್ಲ, ಈ ರಾಜ್ಯಕ್ಕೆ ಮುಖ್ಯಸ್ಥರು. ಈ ಸದನದ ನಾಯಕರು ಕೂಡ ಆಗಿದ್ದಾರೆ. ಅವರು ಈ ದಿಸೆಯಲ್ಲಿ ಮುಂದಾಗಬೇಕು. ಮಾನ್ಯ ಮುಖ್ಯ ಮಂತ್ರಿಗಳು ಈ ಸದನದ ನಾಯಕರು ಇದು ತಮಗೂ ಗೊತ್ತಿದೆ. ನೀವು ಸಹ ಉದಾರತೆಯನ್ನು ತೋರಿ ಏಕ ಪಕ್ಷೀಯವಾದ ನಿರ್ಣಯದ ಮೂಲಕ ವಿಧಾನ ಪರಿಷತ್ತಿನಲ್ಲಿ ಹೊರ ಹೋಗಿರುವ ಸದಸ್ಯರು ಯಾರಿದ್ದಾರೆ ಅವರನ್ನು ಒಳಕ್ಕೆ ತರುವಂತಹ ಪ್ರಯತ್ನವನ್ನು ಮಾಡಬೇಕು. ಸದನದ ಕಲಾಪಗಳು ರಾಜಕೀಯ ತಂತ್ರ, ಪ್ರಜಾ ತಂತ್ರಗಳ ಕಣವಾಗದೇ ಪ್ರಜಾತಂತ್ರದ ಮಾದರಿಯಲ್ಲಿ ನಡೆಯಬೇಕೆಂದು ನಾನು ಆಗ್ರಹ ಮಾಡುತ್ತೇನೆ. ಮಾನ್ಯ ಸಚಿವರಾದ ಖಾರ್ಬರವರು, ಮಾನ್ಯ ರಾಚಯ್ಯನವರು ಇಲ್ಲಿಯೇ ಇದ್ದಾರೆ ಅವರೂ ಕೂಡ ಇದರ ಬಗ್ಗೆ ಗಮನ ಹರಿಸಿ ಇದನ್ನು ಬಗೆ

ಹರಿಸುವ ಪ್ರಯತ್ನವನ್ನು ಮಾಡಬೇಕು, ಅವರು ಮಾಡಿದಂತಹ ಅನುಚಿತ ವರ್ತನೆಗೆ ಶಿಕ್ಷೆ ರೂಪದಲ್ಲಿ ಈಗಾಗಲೇ ಕೆಲವು ದಿವಸ ಅವರನ್ನು ಹೊರಗಡೆ ಇಟ್ಟಾಗಿದೆ ಆದರೆ ಈ ಸದನ ಮುಗಿಯುವವರೆಗೂ ಕೂಡ ಅವರನ್ನು ಹೊರಗೆ ಇಡಬೇಕೆಂದು ಹೇಳುವಂಥಾದ್ದು ನಿಯಮಗೂ ಸಾಧುವಲ್ಲ, ಅವರಿಗೂ ಸಾಧುವಲ್ಲ, ಅಧಿಕಾರದಲ್ಲಿರತಕ್ಕಂತಹ ಪಕ್ಷವಾದ ತಾವು ಧಾರಾಳತನದಿಂದ ಮುಂದೆ ಬಂದು ಏಕ ಪಕ್ಷೀಯವಾಗಿ ಒಂದು ನಿರ್ಣಯವನ್ನು ತಂದು ಪರಿಷತ್ತಿನಲ್ಲಿ ಹೊರ ಹಾಕಿರುವಂತಹ ಇಬ್ಬರು ಸದಸ್ಯರನ್ನು ಒಳಕ್ಕೆ ತರುವಂತಹ ಪ್ರಯತ್ನವನ್ನು ಮಾಡುವುದರ ಮೂಲಕ ವಿಧಾನ ಸಭೆ, ವಿಧಾನ ಪರಿಷತ್ತಿನೊಳಗೆ ಒಳ್ಳೆಯ ಕೆಲಸಗಳು ಆಗುವಂತೆ ತಮ್ಮ ಮುತ್ಸದ್ದಿತನ ಧಾರಾಳತನವನ್ನು ತೋರಬೇಕೆಂದು ಈ ಮೂಲಕ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇಲ್ಲದಿದ್ದರೆ ಪ್ರಜಾ ತಂತ್ರದ ವ್ಯವಸ್ಥೆಯಲ್ಲಿ ಇದನ್ನೆ ಮುಂದುವರಿಸುತ್ತಾ ಹೋದರೆ ಜನತೆಯ ಹಿತದೃಷ್ಟಿಗೆ ಧಕ್ಕೆಯಾಗುತ್ತದೆ ನಾವು ಇಲ್ಲಿಗೆ ಚುನಾಯಿತ ಪ್ರತಿನಿಧಿಗಳಾಗಿ ಬಂದಿರುವಂಥಾದ್ದು ನಮ್ಮ ಋಣ ಪ್ರತಿಷ್ಟೆಯನ್ನು ಬೆಳೆಸುವುದಕ್ಕೆ ಅಲ್ಲ, ಇವತ್ತು ರಾಜ್ಯ ಜನತೆ ಕಣ್ಣೀರಿನಲ್ಲಿ ಕೈ ತೊಳೆಯುತ್ತಿದ್ದಾರೆ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ ಅಂತಹ ಸಂದರ್ಭದಲ್ಲಿ ನಾವು ಈ ರೀತಿ ಋಣ ಪ್ರತಿಷ್ಠೆಯನ್ನು ತೋರಿಸುವುದು ಬೇಡ. ನಮ್ಮ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ ಎಂದು ಮಾನ್ಯ ಜನಾರ್ಧನ ಪೂಜಾರಿಯವರಿಗೆ ಗೊತ್ತಾದ ಮೇಲೆ ಇಲ್ಲಿನ ಸದಸ್ಯರ ಮನೋಭಾವ ಅದನ್ನು ಸುಧಾರಿಸುವುದಕ್ಕೆ ಏನು ಹೋರಾಟ ಇಲ್ಲಿ ನಡೆಯಬೇಕಾಗಿದೆ. ಈ ಸದನದಲ್ಲಿ ಏನು ಚರ್ಚೆಯಾಗಬೇಕಾಗಿದೆ ಎಂಬುದನ್ನು ವಿಚಾರ ಮಾಡಬೇಕಾಗಿತ್ತು. ರಾಜ್ಯದ ಜನತೆಯ ಹಿತದೃಷ್ಟಿಯಿಂದ ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುವುದೇನೆಂದರೆ ಜನತಾ ಸರಕಾರ ಕೂಡ ಋಣ ಪ್ರತಿಷ್ಠೆ ತೋರಿಸದೆ ಯಾರು ಹೊರಗಡೆ ಇದ್ದಾರೆಯವರನ್ನು ಕರೆಯಿಸಿ ಅವರೂ ಕೂಡ ಚರ್ಚೆಯಲ್ಲಿ ಪಾಲ್ಗೊಳ್ಳಲಿ, ಏನು ಸಸ್ಪೆಂಡ್ ಮಾಡಿದ್ದಾರೆ ಅದನ್ನು ರಿವೋಕ್ ಮಾಡಬೇಕೆಂದು ಇದರ ಬಗ್ಗೆ ಏಕ ಪಕ್ಷೀಯವಾದ ನಿರ್ಣಯವನ್ನು ಮಾಡಿ ಅವರನ್ನು ವಾಪಸ್ ಕರೆಯಿಸಿಕೊಳ್ಳಬೇಕೆಂದು ತಮ್ಮ ಮೂಲಕ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ಇವರ ಜೊತೆಗೆ ನಾನೂ ಕೂಡ ಧ್ವನಿಗೂಡಿಸಬೇಕಾಗಿದೆ. ತಾವು ಮುತ್ತು ವೆಂಕಟರಾಮಯ್ಯನವರು ಮೊನ್ನೆಯ ಎಪಸ ಎಲ್ಲಾ ಸೇರಿ ಅವರ ಜೊತೆಯಲ್ಲಿ ಚರ್ಚೆ ಮಾಡಿ ಒಂದು ಇತ್ಯರ್ಥ ಮಾಡಬೇಕೆಂದು ಅದಕ್ಕೆ ಪ್ರಯತ್ನ ಪಡಬೇಕೆಂದು ಹೇಳಿದಿರಿ. ಅದರಂತೆ ನಾವು ಕೂಡ ತಮ್ಮ ಆಜ್ಞೆಗೆ ಶಿರಸಾವಹಿಸಿ, ಪ್ರಯತ್ನ ಪಟ್ಟೆವು, ಅವರ ಹತ್ತಿರ ಮಾತನಾಡಿದಾಗ ಇದು ಇತ್ಯರ್ಥವಾಗಬಹುದೆಂಬ ಆಶಾದಾಯಕವಾದ ಚಿತ್ರವೂ ನಮಗೆ ಇತ್ತು. ಆ ಆಶಾದಾಯಕವಾದ ಚಿತ್ರ ಇವೊತ್ತು ಇದ್ದಹಾಗೆ ಕಂಡು ಬರಲಿಲ್ಲ. ಇವೊತ್ತು ನೇರವಾಗಿ ಅವರು ಹೊರಗಡೆ ಕುಳಿತಿದ್ದಾರೆ. ಮಾನ್ಯ ಜಾಲಪ್ಪನವರು ಸೆಕ್ಷನ್ ೧೫೫ರ ಪ್ರಕಾರ ಅವರನ್ನು ಅರೆಸ್ಟ್ ಮಾಡಬೇಕಾಗಿತ್ತು ಆದರೆ ಮಾಡಿಲ್ಲ, ೫೫ ಸೆಕ್ಷನ್ ಪೋಲೀಸ ಆಕ್ಟ್ ಪ್ರಕಾರ ಅವರನ್ನು ಪೋಲೀಸ್ ಸ್ಟೇಷನ್‌ನಲ್ಲಿ ಕೂಡಿಸಬಹುದಾಗಿತ್ತು, ಮಾನ್ಯ ಪಂಪಾಪತಿಯವರು ಇದೇ ರೀತಿಯಲ್ಲಿ ಮಾಡಿದ್ದಕ್ಕೆ ಅವರನ್ನು ಅರೆಸ್ಟ್ ಮಾಡಿ ಹತ್ತು ದಿವಸದ ತನಕ ಬಳ್ಳಾರಿ ಜೈಲಿನಲ್ಲಿ ಕೂಡಿಸಿದರಿ ಈಗ ನೀವು ಪ್ರಜಾ ತಂತ್ರವನ್ನು ಕಾಪಾಡಬೇಕೆಂಬ ದೃಷ್ಟಿಯಿಂದ ಉದಾರವಾಗಿ ನಡೆಯುಕೊಂಡಿದ್ದರೆ ಅನ್ನು ಇತ್ಯರ್ಥವಾಗುತ್ತಿತ್ತು ಎಂದು ನನಗೆ ಅನ್ನಿಸುತ್ತದೆ. ಈ ರೀತಿ ಹೊರಗಡೆ ಕುಳಿತುಕೊಳ್ಳುವುದಕ್ಕೆ ಅವರಿಗೆ ಅವಕಾಶ ಸಿಗುತ್ತಿರಲಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಗಮನಹರಿಸಿ ಎಲ್ಲರನ್ನೂ ಕರೆಯಿಸಿ ಚರ್ಚೆ ಮಾಡಿದ್ದರೆ ಸಮಸ್ಯೆ ಇತ್ಯರ್ಥವಾಗಂತ್ತಿತ್ತು. ಇದರ ಜವಾಬ್ದಾರಿ ನಿಮ್ಮ ಮೇಲೆ ಇದೆ ಇದನ್ನು ನೀವು ವಹಿಸಿಕೊಳ್ಳಬೇಕು. ಅದನ್ನು ನಮಗೆ ವಹಿಸಿದರೆ ಪ್ರಯೋಜನವಾಗುವುದಿಲ್ಲ. ಮಾನ್ಯ ಜಾಲಪ್ಪನವರು, ಮಾನ್ಯ ಪಟೇಲ್‌ರವರು, ಮಾನ್ಯ ರಾಚಯ್ಯನವರು ಮಾತನಾಡಿದರೂ ಕೂಡ ಅದು ಇತ್ಯರ್ಥವಾಗುತ್ತಿರಲಿಲ್ಲವೋ ಏನೋ ಎಂದು ಅನ್ನಿಸುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಕರೆಯಲಿ ನಾವು ಬರುತ್ತೇವೆಂದು ಹೇಳಿದರು. ಬೆಂಕಿಗೆ ತುಪ್ಪ ಹಾಕುವ ರೀತಿಯಲ್ಲಿ ಹೊರಗಿನವರು ಇವಕ್ಕೆ ಪ್ರಚೋದನೆ ಮಾಡಿದ್ದಾರೆಂದು ನಮಗೆ ತಿಳಿದುಬಂದಿರುವ ವರ್ತಮಾನ, ಜನಾರ್ಧನ ಪೂಜಾರಿಯವರು ಇಲ್ಲಿಗೆ ಬಂದು ಏನೋ ಮಾಡಿದ್ದಾರೆಂದು ತಿಳಿದುಬಂದಿದೆ.ಆದರೂ ಅವರು ಈ ರೀತಿ ಹೊರಗಡೆ ಕುಳಿತುಕೊಳ್ಳುವುದು ಸರಿಯಾದುದಲ್ಲ ಈ ಸದನದಲ್ಲಿ ಬಂದು ಚರ್ಚೆ ಮಾಡಬಹುದಾಗಿತ್ತು, ಏನೂತೊಂದರೆಯಾಗುತ್ತಿರಲಿಲ್ಲ. ಹೊರಗಡೆ ಕುಳಿತಿದ್ದಾರೆ ಪರಿಸ್ಥಿತಿ ಬಿಗಡಾಯಿಸಿರುವುದರಿಂದ ಏನಾದರೂ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಮಾನ್ಯ ಮುಖ್ಯ ಮಂತ್ರಿಗಳನ್ನು

ಬಿಟ್ಟು ತಾವೇ ಒಂದು ಕಾರ್ಯಕ್ರಮ ತೆಗೆದುಕೊಳ್ಳಿ ನಿಮ್ಮ ಬಗ್ಗೆ ಎಲ್ಲರಿಗೂ ಗೌರವವಿದೆ ಮೇಲ್ಮನೆಯ ಕೆಳಮನೆಯ ಆ ಕಡೆಯ ಈ ಕಡೆಯ ಸದಸ್ಯರು ನಿಮಗೆ ಗೌರವ ಕೊಡುತ್ತಾರೆ ತಾವು ಎಲ್ಲರನ್ನೂ ಸೇರಿಸಿ ಮೀಟಿಂಗ್ ಮಾಡಿ ಚರ್ಚೆ ಮಾಡಿ ಇತ್ಯರ್ಥ ಮಾಡಿದರೆ ಒಳ್ಳೆಯದಾಗುತ್ತದೆ ಇವತ್ತು ಮಾನ್ಯ ಮುಖ್ಯಮಂತ್ರಿಗಳ ಉತ್ತರ ಇತ್ತು ಅವರು ಯಾರಿಗೋಸ್ಕರ ಮಾತನಾಡುತ್ತಾರೆ ನಾಳೆ ಬಿಲ್‌ಗಳನ್ನು ತರುತ್ತಾರೆ ಯಾರಿಗೋಸ್ಕರ ತರುತ್ತಾರೆಯೋ ನನಗಂತೂ ಗೊತ್ತಿಲ್ಲ. ಆ ಬಿಲ್ಲು ಕೂಡಾ ಚರ್ಚೆಯಾಗಬೇಕು ಎಲ್ಲರೂ ಇದ್ದರೆ ಇದು ಚರ್ಚೆಯಾಗುತ್ತದೆ. ಇಲ್ಲದಿದ್ದರೆ ಇದು ಪ್ರಜಾ ಪ್ರಭುತ್ವ ಅನಿಸಿಕೊಳ್ಳುವುದಿಲ್ಲ. ಬಿಲನ್ನು ಚರ್ಚೆ ಇಲ್ಲದೇ ಪಾಸು ಮಾಡಿಕೊಳ್ಳಬಹುದು ವೆಂಜಾರಿಟಿ ಇದೆ ಆದರೆ ಅದು ಪ್ರಜಾಪ್ರಭುತ್ವಕ್ಕೆ ಯೋಗ್ಯವಾದ ಲಕ್ಷಣ ಅಲ್ಲ, ಬಿಲ್‌ಗಳನ್ನು ಪಕ್ಕದಲ್ಲಿ ಇಡಿ, ಏನೂ ಆಗುವುದಿಲ್ಲ, ಬೇಕಾದರೆ ಸದನವನ್ನು ಇನ್ನು ವಾರ ಮುಂದುವರಿಸಿದರೂ ನಮ್ಮದೇನೂ ವಿರೋಧ ಇಲ್ಲ ಈ ಪರಿಸ್ಥಿತಿಯನ್ನು ಇತ್ಯರ್ಥ ಮಾಡಲಿಕ್ಕೆ ತಾವು ಪ್ರಯತ್ನ ಮಾಡಬೇಕು ಎಂದ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಈಗ ಅವರು ಏನು ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ ಅದನ್ನು ಕೆ ಬಿಟ್ಟು ಒಳ್ಳೆಯ ರೀತಿಯಲ್ಲಿ ಒಂದು ವಾತಾವರಣವನ್ನು ಕಲ್ಪಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಈ ಸದನದಲ್ಲಿ ತಮ್ಮ ಮೂಲಕ ಕೇಳಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ಇದನ್ನು ಇತ್ಯರ್ಥ ಮಾಡುವುದಕ್ಕೆ ಎಲ್ಲರೂ ಸೇರಬೇಕು ಎಂದು ಹೇಳುತ್ತೇನೆ, ಮತ್ತು ಈ ರೀತಿ ಮಾಡಿದರೆ ಇದು ಬಹಳ ಒಳ್ಳೆಯದು ಎಂದು ನನಗನ್ನಿಸುತ್ತದೆ.

ಶ್ರೀ ಆರ್ ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ವಿರೋಧ ಪಕ್ಷದ ಪಾತ್ರವೂ ಒಂದು ಬಹಳ ಮುಖ್ಯವಾದ ಪಾತ್ರ ಅವರು ಮೇಯಿನ್ ಅಪೋಸಿಷನ್ ಪಾರ್ಟಿ ಈಗ ಏನಾಗಿದೆ ಎಂದರೆ ನಮ್ಮ ಸರ್ಕಾರದವರು ಇವನ್ನು ಪ್ರಿಸ್ಟೀಜ್ ಇಷ್ಯು ಮಾಡಿಕೊಂಡುಬಿಟ್ಟಿದ್ದಾರೆ ಅವರದು ಎಂದರೆ ವಿರೋಧ ಪಕ್ಷದವರು ಮಾಡುವಂಥದ್ದನ್ನು ಫಸಕಾರ್ಡ ಎಂದು ನಾನು ಒಪ್ಪುವುದಿಲ್ಲ ಉದಾರಭಾವದಿಂದ ಆಳುವ ಪಕ್ಷದವರು ಅವರದು ವಿರೋಧಪಕ್ಷ ಎಂದೆ ಮನಸ್ಸಿನಲ್ಲಿ ಇಟ್ಟುಕೊಂಡು ಸಮಸ್ಯೆಯನ್ನು ಇತ್ಯರ್ಥ ಮಾಡಿದ್ದರೆ ಈ ವೇಳೆಗೆ ಸೆಟ್ಲ್ ಆಗುತ್ತಿತ್ತು ನಾಲ್ಕಾರು ಸಾರಿಯಿಂದ ಅವರನ್ನು ಕರೆಯಿರಿ ಎಂದು ಹೇಳುತ್ತಿದ್ದೇವೆ ಇಷ್ಟು ಹೊತ್ತಿಗೆ ಅದು ಇತ್ಯರ್ಥವಾಗಬಹುದಿತ್ತು ಇದೇನು ದೊಡ್ಡ ಸಮಸ್ಯೆ ಏನಲ್ಲ ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಆಗಿದ್ದ ವಿಷಯದಲ್ಲಿ ನಮ್ಮ ಸಭೆಗೂ ಕೂಡಾ ಆ ಒಂದು ರೋಗ ಅಂಟಿದೆ. ಅವರು ಸಹಿ ಮಾಡಿ ಬಹಿಷ್ಕಾರ ಮಾಡುತ್ತಿದ್ದಾರೆ. ಅಲ್ಲ ದುಡ್ಡು ಕೂಡ ವಿಗುತ್ತಿಲ್ಲ. ಬರುವ ೭೫ ರೂಪಾಯಿ ಅದು ಕೂಡಾ ಖರ್ಚಾಗುತ್ತಿದೆ.

ಶ್ರೀ ಸಿ. ಬೈರೇಗೌಡ.—ಅಧ್ಯಕ್ಷರೆ...

ಶ್ರೀಮತಿ ಲೀಲಾದೇವಿ ಆರ್, ಪ್ರಸಾದ್,—ಅಧ್ಯಕ್ಷರೇ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ.

ಅಧ್ಯಕ್ಷರು.—ಮಾನ್ಯ ಬೈರೇಗೌಡರೇ ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿ. ಬೈರೇಗೌಡ.—ಅಧ್ಯಕ್ಷರೇ, ನಮ್ಮಲ್ಲಿ ಒಂದು ಗಾದೆ ಇದೆ.....

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ, ಮಾನ್ಯ ಯಡಿಯೂರಪ್ಪನವರು, ಎಂ. ಎಸ್. ಕೃಷ್ಣನ್‌ರವರು ಹೇಗೆ ಮಾತನಾಡಿದರು ನೋಡಿ, ನೀವು ಹೇಗೆ ಮಾತನಾಡಿದಿರಿ ನೋಡಿ.

(ಗೊಂದಲ)

ಶ್ರೀಮತಿ ಲೀಲಾದೇವಿ ಆರ್, ಪ್ರಸಾದ್.—ಅಧ್ಯಕ್ಷರೇ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ.....

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಇದನ್ನು ಎಲ್ಲರೂ ಸೇರಿ ಚರ್ಚೆಮಾಡಿ ಇದನ್ನು ಇತ್ಯರ್ಥ ಮಾಡಬೇಕು.....

(ಗೊಂದಲ)

ಶ್ರೀ ಸಿ. ಬೈರೇಗೌಡ.—ರಂಜು ಮಾಡಿ ಇಲ್ಲಿ ಬಂದರು ದಿನಭತ್ಯವನ್ನು ಪಡೆದುಕೊಳ್ಳುತ್ತಿದ್ದಾರೆ... ನಮ್ಮಲ್ಲಿ ಕೆಲಂಗಿನಲ್ಲಿ ಒಂದೂ ಗಾದೆ ಇದೆ.

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ವೆಂಕಟರಾಮ್ಯನವರು ಒಂದು ವಿಷಯ ಪ್ರಸ್ತಾಪ ಮಾಡಿದ್ದಾರೆ.....

(ಗೊಂದಲ)

ಶ್ರೀ ಸಿ. ಬೈರೇಗೌಡ.—ನಮ್ಮಲ್ಲಿ ತೆಲುಗಿನಲ್ಲಿ.....

ಅಧ್ಯಕ್ಷರು.—ಮಾನ್ಯ ಬೈರೇಗೌಡರೇ, ಈ ವಿಷಯವನ್ನು ಮುಗಿಸಬೇಕೋ ಅಥವಾ ಬೆಳಿಸಬೇಕೋ ಎಂದು ಇದ್ದೀರೋ ?

ಶ್ರೀ ಜೆ.ಹೆಚ್. ಪಟೇಲ್.—ಇಲ್ಲಿ ರಂಜು ಮಾಡಿರುವ ಪ್ರಶ್ನೆ ಬೇಡ. ಈಗ ಮಾನ್ಯ ಯಡಿಯೂರಪ್ಪನವರು, ಕೃಷ್ಣನ್‌ರವರು ಮತ್ತು ವೆಂಕಟರಾಮಯ್ಯನವರು ಹೇಳಿರುವ ಮಾತನ್ನು ಕೇಳಿ ನಾನು ಅವರಿಗೆ ನಮ್ಮ ಮೂಲಕ ಇಷ್ಟೆ ಏನಂತಿ ಮಾಡಿಕೊಳ್ಳುವುದು. ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಆಳುವ ಪಕ್ಷ, ವಿರೋಧ ಪಕ್ಷ ಇವುಗಳ ವಂಧ್ಯೆ ಹಲವಾರು ರೀತಿಯ ಪ್ರತಿಭಟನಾ ಕ್ರಮಗಳು ನಡೆದಂ ಅದು ರೂಲ್ಸ್‌ಗೆ ವಿರೋಧ ಇದ್ದಾಗ ರೂಲ್ಸ್‌ನ ಪ್ರಕಾರ ನಾವು ಶಿಕ್ಷೆಯನ್ನು ಅನುಭವಿಸುವುದಕ್ಕೆ ತಯಾರು ಇರಬೇಕಾಗುತ್ತದೆ. ಇದಲ್ಲಾ ನಡೆದುಕೊಂಡು ಬಂದಿರತಕ್ಕಂಥದ್ದು, ಬೇಕಾದಷ್ಟು ಘಟನೆಗಳನ್ನು ನಾವು ನೋಡಿದ್ದೇವೆ. ನೀವೂ ನೋಡಿದ್ದೀರಿ. ಆದರೆ ಇದು ಒಂದು ವಿಶಿಷ್ಟವಾದಂಥ ಸಂಗತಿ. ಧರಣಿ ಮಾಡಿದಾಗ ಹಲವಾರು ಸಾರಿ ಶಿಸ್ತಿನಕ್ರಮ ತೆಗೆದುಕೊಂಡಾಗ ಅಥವಾ ಹೊರಗೆ ಹಾಕಿದಾಗ ಸಭಾಧ್ಯಕ್ಷರು ಏನಾದರೂ ಕ್ರಮ ಕೈಗೊಂಡಿದ್ದಾರ ನಾವೇ ತಮ್ಮನ್ನು ಕೇಳಿಕೊಂಡಿದ್ದೇವ, ಅವರನ್ನ ಕರೆದು ಮಾತನಾಡೋಣ ಎಂದು ಅದು ಎಂತಹ ಸಂದರ್ಭ. ಮಾನ್ಯ ಕೃಷ್ಣನ್‌ರವರು ಈ ಸದನದಲ್ಲಿ ಅನೇಕ ವರ್ಷಗಳಿಂದಲೂ ಪ್ರತಿನಿಧಿಗಳಾಗಿದ್ದಾರೆ. ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಅಲ್ಲಿನ ಸದಸ್ಯರು ಅಲ್ಲಿನ ಸಭಾಪತಿಗಳ ಬಗ್ಗೆ ಅವಾಚ್ಯವಾಗಿ ಮಾತನಾಡಿದರು ಏನ್ನುವ ಕಾರಣಕ್ಕೋಸ್ಕರ ಆ ಸದನದಲ್ಲಿ ಆದ ಒಂದು ತೀರ್ಮಾನದ ಪ್ರಕಾರ ಇಬ್ಬರನ್ನು ಸದನದಿಂದ ಸಸ್ಪೆಂಡ್ ಮಾಡಿದರು ಅದು ಆ ಸದನಕ್ಕೆ ಅಲ್ಲಿಗೇ ಸೀಮಿತ, ಅದು ಅಲ್ಲಿಯೇ ತೀರ್ಮಾನವಾಗಬೇಕು, ಏನು ಅಲ್ಲಿ ಬಡಾವಣೆ ಆಗಬೇಕು, ಆ ಬಗ್ಗೆ ಆ ಸದನವ ಸಭಾನಾಯಕರು, ಮಾನ್ಯ ಮುಖ್ಯಮಂತ್ರಿಗಳು ಎಲ್ಲರೂ ಸರ್ವ ಪ್ರಯತ್ನ ಮಾಡಿ ಏನೋ ಒಂದು ಆಗುತ್ತದೆ. ಏಕೆಂದರೆ ವಿರೋಧ ಪಕ್ಷದವರನ್ನು ಬಿಟ್ಟು ನಾವು ಸದನವನ್ನು ನಡೆಸುವುದಕ್ಕೆ ನಮಗೆ ಯಾವುದೇ ಸಂದರ್ಭದಲ್ಲೂ ಆ ತರಹ ಇಚ್ಛೆ ಇಲ್ಲ. ಅದರಲ್ಲಿ ಸ್ವಾರಸ್ಯ ಕೂಡಾ ಇಲ್ಲ. ಮಾನ್ಯ ಅಧ್ಯಕ್ಷರೇ, ವಿಧಾನ ಪರಿಷತ್ತಿನಲ್ಲಿ ನಡೆದಿರತಕ್ಕದ್ದಕ್ಕೆ ಕಾರಣ ಏನು, ಶ್ರೀ ಖರ್ಗೆ ಅವರು ನಾವು ಸದನವನ್ನು ಬಹಿಷ್ಕರಿಸುತ್ತೇವೆ, ಅವರ ಸಸ್ಪೆನ್ಷನ್‌ಅನ್ನು ರದ್ದು ಮಾಡುವ ವರೆಗೆ, ನಾವು ಬರುವುದಿಲ್ಲ ಇದು ಯಾವ ಕಾಲದಲ್ಲಿಯೂ, ಯಾವ ರಾಜ್ಯದಲ್ಲಿಯೂ ನಡೆದಿರುವುದಂ ಉಂಟೇ ? ನಾವು ಇದರ ಬಗ್ಗೆ ಹೇಳುವುದಾದರೆ ಇಂತಹ ಹಲವಾರು ಘಟನೆಗಳು ನಡೆದಿವೆ. ಕೆಲವು ಸಾರಿ ಸದಸ್ಯರನ್ನು ಎತ್ತಿ ಹಾಕುವಂಥ ಸಂದರ್ಭಗಳೂ ಇವೆ, ಆದರೆ ಪ್ರಸಕ್ತ ಸ್ಥಿತಿ ಮಾತ್ರ ವಿಚಿತ್ರ ಸಂದರ್ಭವಾಗಿದೆ. ಮಾನ್ಯ ಕೃಷ್ಣನ್‌ರವರು, ಮಾನ್ಯ ಯಡಿಯೂರಪ್ಪನವರು, ಮಾನ್ಯ ವೆಂಕಟರಾಮಯ್ಯನವರು ಮನಸ್ಸಿಗೆ ಎಷ್ಟು ನೋವಾಗಿದೆ, ಅವರೂ ಒಂದು ವಿಷಯವನ್ನು ಯೋಚಿಸಬೇಕು, ಪ್ರಜಾತಂತ್ರೀಯ ವ್ಯವಸ್ಥೆಯಲ್ಲಿ ಕೆಲವು ರೂಲ್ಸ್‌ಗಳು ಇರುತ್ತವೆ, ಸಂಪ್ರದಾಯಗಳು ಇರುತ್ತವೆ, ವಿಧಾನ ಸಭೆಯಲ್ಲಿಯೂ ಸಹ ಒಂದು ಸಂಪ್ರದಾಯ ಇದೆ. ಎಷ್ಟು ಒಳ್ಳೆಯ ರೀತಿಯಲ್ಲಿ ಸಂಪ್ರದಾಯಗಳು ನಡೆಸಿಕೊಂಡು ಬರಲಾಗಿದೆ. ಆದರೆ ಇಷ್ಟು ಕೆಟ್ಟದಾಗಿ ಯಾವುದೇ ಸಮಯದಲ್ಲಿ ನಡೆದಿಲ್ಲ ನಮ್ಮ ಕಾಂಗ್ರೆಸ್ ಸ್ನೇಹಿತರಿಂದ ಅಹಿತಕರವಾದ ಘಟನೆ ನಡೆದಿದೆ. ಇದು ಅಹಿತಕರ ಘಟನೆಯಲ್ಲ. ಮೂಲಕ ವಿಧಾನ ಪರಿಷತ್‌ನ ಸಭಾಪತಿಯವರಿಗೆ ಅಗೌರವ ಆಗುವ ಮಾತನ್ನು ಆಡಿದ್ದಾರೆ ಅವರು ಸರ್ಕಾರಕ್ಕೆ ಏನೂ ಹೇಳುವುದು ಬೇಡ, ಸರ್ಕಾರಕ್ಕೆ ಕ್ಷಮೆ ಕೇಳುವುದೂ ಬೇಡ. ಅವರಿಗೆ ಸಮಾಧಾನ ಆಗುವುದಾದರೆ ಸರ್ಕಾರಕ್ಕೆ ಬೇಕಾದರೆ ಬಯ್ಯಲಿ. ಆದರೆ ವಿಧಾನ ಪರಿಷತ್ತಿನ ಸಭಾಪತಿಯವರ ಕ್ಷಮಾಪಣೆ ಕೇಳಬೇಕು. ಎಂದು ನಾವು ಹೇಳಿರುವುದು.

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು.—ಮಾನ್ಯ ಕೃಷ್ಣನ್‌ರವರೇ ಅವರು ಪೂರ್ತಿ ಹೇಳಲಿ.

ಶ್ರೀ ಜೆ.ಹೆಚ್. ಪಟೀಲ್.— ಮಾನ್ಯ ಸದಸ್ಯರು ಒಂದು ವಿಷಯವನ್ನು ತಿಳಿದುಕೊಳ್ಳಬೇಕು. ಇಲ್ಲಿ ಧರಣಿ ಮಾಡಿರುವುದೂ ಹಾಗೂ ಧರಣಿ ಮಾಡಿ ಜೈಲಿಗೆ ಹೋಗಿರುವುದೂ ಉಂಟು. ಆದರೆ ಅವರು ಏನು ವಿಚಾರವನ್ನು ಜನರಿಗೆ ಹೇಳುತ್ತಿದ್ದಾರೆ ಅದನ್ನು ಮಾನ್ಯ ಕೃಷ್ಣನ್‌ರವರು ಸ್ವಲ್ಪ ಆಲೋಚನೆ ಮಾಡಬೇಕು. ನಾವು ನೇರವಾಗಿ ಕಣ್ಣಾರೆ ಕಂಡ ವಿಷಯಗಳನ್ನು ಚರ್ಚೆ ಮಾಡತಕ್ಕಂಥ ಅವಕಾಶವನ್ನು ಕೊಡದೇ ನಮ್ಮನ್ನು ಬಾಯಿ ಮುಚ್ಚಿಸುವುದಕ್ಕೋಸ್ಕರ ರಾಮಕೃಷ್ಣ ಹೆಗಡೆ ಅವರು ನಮ್ಮನ್ನು ಹೊರಗೆ ಹಾಕಿದ್ದಾರೆ ಇದು ಎಷ್ಟು ಅಸತ್ಯ ಎಷ್ಟು ಆತ್ಮ ವಂಚನೆಯಂ ಮಾತು ಅವರಿಗೆ ಇಂತಹ ಗಂಭೀರವಾದ ವಿಷಯಗಳ ಬಗ್ಗೆ ನಿಜಕ್ಕೂ ಚರ್ಚೆ ಮಾಡಬೇಕೆಂಬ ಇಚ್ಛೆ ಇದ್ದರೆ, ಲೆಜಿಸ್ಲೇಟೀವ್ ಕೌನ್ಸಿಲ್ ಆದಂಥ ವೈಯ ಕ್ತಿಕ ಘಟನೆ ಅಲ್ಲ. ಸಭಾಪತಿಯವರ ಬಗ್ಗೆ ಅಗೌರವ ಆಗುವ ರೀತಿಯಲ್ಲಿ ಮಾತನಾಡಿದ ವಿಷಯವನ್ನು ದೊಡ್ಡದು ಮಾಡಿಕೊಂಡು ಹನುಮಂತಯ್ಯನವರ ಪ್ರತಿಮೆಯ ಕೆಳಗೆ ಕೂಳಿತರೆ, ಅವರಿಗೇನಾದರೂ ಈ ಪಾರ್ಲಿಮೆಂಟರಿ ಪದ್ಧತಿ ಗೌರವ ಇದೆಯೇ ? ಅವರು ಜನರ ಹತ್ತಿರ ಹೋಗುತ್ತೇನೆಂದು ಹೇಳುತ್ತಾರೆ, ಶ್ರೀಮಾನ್ ನರಸಿಂಹಮೂರ್ತಿಯವರು ಜನಗಳ ಹತ್ತಿರ ಹೋಗಲಿ, ಜನರು ಇದು ಸರಿಯೋ ತಪ್ಪೋ ಎಂದು ಅವರೇ ನಿರ್ಧರಿಸುತ್ತಾರೆ. Financial Position of the Government ಬಗ್ಗೆ ಮಾತನಾಡುತ್ತಾ ಇದ್ದೆವು, ನಮ್ಮನ್ನು ಹೊರಗೆ ಕಳಿಸಿದ್ದಾರೆ ಎಂದು ಕೆಂಗಲ್ ಹನುಮಂತಯ್ಯ ಪ್ರತಿಮೆಯ ಕೆಳಗೆ ಕಂಳಿತು ಧರಣಿ ಮಾಡುತ್ತಾ ಇದ್ದಾರೆ. ಅವರಿಗೆ ಇಂತಹ ಆಸಕ್ತಿ ಇದ್ದಿದ್ದರೆ ಅವರು ಈ ಕೆಲಸ ಮಾಡುತ್ತಾ ಇರಲಿಲ್ಲ. ಅವರ ಪ್ರಿಯಾರಿಟೀಸ್ ಯಾವುದು ? ಅವರು ಯಾವುದನ್ನು ಹೆಚ್ಚು ಪ್ರಿಯಾರಿಟಿ ಎಂದು ಹೇಳುತ್ತಾರೆ. ಅವರು ಒಂದುಮಾತನ್ನು ತಿಳಿದುಕೊಳ್ಳಬೇಕು. ನಾವು ಏನಾದರೂ ಅವರನ್ನು ಹೊರಗೆ ಹಾಕಿದ್ದರೆ, ಸದನದ ಬಲದಿಂದ ಹೊರಗೆ ಹಾಕಿದ್ದರೆ ನಾವು ಏನಂ ತೀರ್ಮಾನ ಮಾಡಬೇಕೆಂದು ಹೇಳುತ್ತಿದ್ದೀರೋ ಅದನ್ನು ನಾವು ಒಪ್ಪಿಕೊಳ್ಳಬಹ ದಾಗಿತ್ತು. ಆದರೆ ಮಾನ್ಯ ಸದಸ್ಯರು ಹೇಳಿದ್ದಾರೆ ಕರೆಯಿಸಬೇಕು ಎಂದು; ನಾವು ಯಾರನ್ನು ಬೇಕಾದರೂ ಕರೆಸಬಹುದು, ಅವರು ಬರಬೇಕು, ಕಾಂಗ್ರೆಸ್ ಮಿತ್ರರು ಹಾಗೂ ಆಳುವ ಪಕ್ಷದೊಂದಿಗೆ ಯಾವುದೇ ಇಷ್ಯೂ ಇಲ್ಲ. ಇದನ್ನು ದಯವಿಟ್ಟು ಮಾನ್ಯ ಸದಸ್ಯರುಗಳು ಅರ್ಥ ಮಾಡಿಕೊಳ್ಳಬೇಕು. ಸರ್ಕಾರದ ಮೇಲೆ ಆಗಲಿ ಅದರ ನಿಲುವಿನ ಬಗ್ಗೆ ಆಗಲಿ ಅವರು ಮಾತನಾಡುವುದಕ್ಕೆ ನಮಗೆ ಯಾವುದೇ ಒಂದು ಭಿನ್ನಾಭಿಪ್ರಾಯ ಇಲ್ಲ. ಯಾವುದೋ ಒಂದು ರೆಸಲ್ಯೂಷನ್ ಆಗಲೀ ಸರ್ಕಾರದ ಫೈನಾನ್ಷಿಯಲ್ ಪೊಸಿಷನ್ ಲೆಜಿಸ್ಲೇಟೀವ್ ಬಿಸಿನೆಸ್ ಮಟ್ಟಿಗೆ, ಅವರಿಗೂ ನಮಗೂ ಏನಾದರೂ ಭಿನ್ನಾಭಿಪ್ರಾಯ ಇದೆಯೇ ? ಅವರು ಸಭಾಪತಿಯವರ ಬಗ್ಗೆ ಅಗೌರವದಿಂದ ನಡೆದುಕೊಂಡಿರುವುದರಿಂದ ಅವರಾಗಿಯೇ ಕ್ಷಮಾಪಣೆ ಕೇಳಿ ಸಭೆಗೆ ಬರಬೇಕು, ಅವರು ಮಾತನಾಡಿದ್ದು ಸರ್ಕಾರದ ಯಾವುದೇ ಕಾರ್ಯಕ್ರಮಕ್ಕೆ ಸಂಬಂಧಪಟ್ಟಿದ್ದು ಅಲ್ಲ ಅವರಿಗೆ ನಿಜವಾಗಿ ಸರ್ಕಾರದ ಮೇಲೆ ಸತ್ಕಾಂಶದ ವಿಷಯವನ್ನು ಹೇಳಬೇಕೆಂದು ಮನಸ್ಸು ಇದಿದ್ದರೆ ಖಂಡಿತ ಅವರು ಇದನ್ನು ಮಾಡುತ್ತಿರಲಿಲ್ಲ. As a matter of fact, I consider, they are trying to ridicule these democratic institutions. There is a systematic approach to dengirate these institutions.

ವಿಧಾನಸಭೆ ಎಂದರೇನು ? ವಿಧಾನ ಪರಿಷತ್ ಎಂದರೇನು? ಅಧ್ಯಕ್ಷರು ಎಂದರೇನು?ಸಭಾಪತಿಯವರು ಎಂದರೇನು? ಈ ಬಗ್ಗೆ ಇಷ್ಟೊಂದು ಲಘುವಾಗಿ ಮಾತನಾಡುವುದು ಸರಿಯೇ ? ಈ ದೇಶದಲ್ಲಿರುವಂಥ ಕಾನೂನು ವ್ಯವಸ್ಥೆ, ಈ ದೇಶದಲ್ಲಿನ ಪಾರ್ಲಿಮೆಂಟ್ರಿಯನ್ ವ್ಯವಸ್ಥೆ ಹಾಗೂ ಸಂಸದೀಯ ವ್ಯವಸ್ಥೆ ಏನಿವೆ, ಈ ವ್ಯವಸ್ಥೆಗಳಿಗೆ ಇರುವಂತಹ ಗೌರವವನ್ನು ಬರುಬರುತ್ತಾ, ಕಡಿಮೆ ಮಾಡುವ ರೀತಿಯಲ್ಲಿ ಮಾತನಾಡಿ ಮಾತನಾಡಿದು ಸರಿಯಲ್ಲ.ವಿಧಾನಸಭೆಯಲ್ಲಿ ಇಂಥಾದ್ದೆಲ್ಲಾ ನಡೆಯುವುದರಿಂದಲೇ ಬಸ್‌ಗೆಳಲ್ಲಿ ಯಾರಿಗಾದರೂ ಜಗಳವಾದಾಗ ಇದೇನು ವಿಧ ನಸಭೆ ಕೆಟ್ಟುಹೋಯಿತೇ ಎಂದು ಜನಸಾಮಾನ್ಯರು ಮಾತನಾಡಿಕೊಳ್ಳುವ ಮಟ್ಟಕ್ಕೆ ಇದು ಹೋಗಿದೆ, ಈ ಸಂಸ್ಥೆಗಳ ವಿಚಾರದಲ್ಲಿ ಜನರು ಅಷ್ಟು ಲಘುವಾಗಿ ಮಾತನಾಡ ವುದಕ್ಕೆ ನಾವು ಅವಕಾಶ ಮಾಡಿಕೊಡುವುದು ಇದು ಸರಿಯಲ್ಲ. ಈ ಸಂಸ್ಥೆಗಳಿಗೆ ಇರುವಂತಹ ಗೌರವವನ್ನು ನಾವೆಲ್ಲರೂ ಉಳಿಸಬೇಕು ನನ್ನ ಮೇಲೆ ಏನಾದರೂ ಹಿಟ್ಟಿದ್ದರೆ ಅವರು ಇಲ್ಲಿಗೆ ಬಂದು ಮಾತನಾಡಲಿ. ಇಲ್ಲಿ ಎಲ್ಲರೂ ಸೇರಿ ಚರ್ಚೆ ಮಾಡೋಣ, ವಿಚಾರ ವಿನಿಮಯ ಮಾಡೋಣ, ಅದನ್ನು ಬಿಟ್ಟು ಈ ರೀತಿ

ಮಾಡಿದರೆ ಹೇಗೆ ? ಒಂದು ಸಲ ಇದೇ ಸಭೆಯಲ್ಲಿ ಮೇಲ್ಮನವಿಮಂತ್ರಿಗಳ ಮೇಲೆ ಕೈಮಾಡುವುದಕ್ಕೆ ಬಂದರು. ಆಗಲೂ ಸಹ ನಾವು ಸಹಿಸಿಕೊಂಡೆವು. ನಮ್ಮ ವಿಧಾನಸಭೆ ಇನ್ನೂ ಮದ್ರಾಸ್‌ನ ಲೆವಲ್‌ಗೆ ಹೋಗಿಲ್ಲ. ಆ ಲೆವಲ್‌ಗೆ ಹೋಗಬಾರದು. ಆ ಒಂದು ಕಳಕಳಿಯಿಂದ ನಾವು ಇದೇ ಸಭೆಯಲ್ಲಿ ಎಷ್ಟೋ ಸಲ ತಗ್ಗಿ ನಡೆದುಕೊಂಡಿದ್ದೇವೆ. ಮಾನ್ಯ ದೇವರಾಜ್‌ಅರಸ್ ಅವರು ಮತ್ತು ಮಾನ್ಯ ಗುಂಡೂರಾವ್ ಅವರು ಮುಖ್ಯಮಂತ್ರಿಗಳಾಗಿದ್ದ ಸಮಯದಲ್ಲಿ ನಾನು ವಿರೋಧಪಕ್ಷದಲ್ಲಿದ್ದೆ. ಆ ಸಮಯದಲ್ಲಿ ನಾನು ಕೆಲವೊಂದು ವಿಚಾರಗಳ ಬಗ್ಗೆ ಸಾಕಷ್ಟು ವಿರೋಧ ವ್ಯಕ್ತಪಡಿಸಿದ್ದೇನೆ. ಸಾಕಷ್ಟು ಪ್ರತಿಭಟನೆ ವ್ಯಕ್ತಪಡಿಸಿದ್ದೇನೆ. ಆ ಸಮಯದಲ್ಲಿ ಸಾಕಷ್ಟು ವಿಚಾರವಿನಿಮಯಗಳು ನಡೆಯುತ್ತಿದ್ದವು. ಕೆಲವು ಸಲ ಆವೇಶದಿಂದ ನಮ್ಮ ಅಭಿಪ್ರಾಯಗಳನ್ನು ತೀವ್ರವಾಗಿ ವ್ಯಕ್ತಪಡಿಸಿದ್ದು ಉಂಟು. ಆದರೆ ಈ ಸಂಸ್ಥೆಗಳಿಗೆ ಅಗೌರವ ತೋರಿಸುವಂತಹ ಕೆಲಸವನ್ನು ನಾವು ಯಾವಾಗಲೂ ಮಾಡಿಲ್ಲ. ಈ ಸಂಸದೀಯ ಸಂಸ್ಥೆಗಳು ಉಳಿಯಬೇಕು. ಏಕೆಂದರೆ ಇದನ್ನು ಬಿಟ್ಟರೆ ಬೇರೆ ವ್ಯವಸ್ಥೆ ನಮಗೆ ಇಲ್ಲ. ಅವರು ಪಾಲಿಮೆಂಟಿನ ಮುಂದೆ ಸತ್ಯಾಗ್ರಹ ಮಾಡುವುದಾದರೆ ನಾವೂ ಸಹ ಅಂಬೇಡ್ಕರ್ ವಿಗ್ರಹದ ಮುಂದೆ ಮಾಡಬಹುದು. ಆದರೆ ಆ ರೀತಿ ಮಾಡುವುದಕ್ಕೆ ಬರುವುದಿಲ್ಲ, ಇದು ಒಪನ್ ಏರ್ ಥಿಯೇಟರ್ ಅಲ್ಲ. ಈ ವಿಚಾರದಲ್ಲಿ ಈಗ ಮಾತನಾಡಿದಂಥ ಸದಸ್ಯರಿಗೆ ಎಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ನಮಗೂ ಇದೆ. ಆದ್ದರಿಂದ ನಾನು ಈಗ ಹೇಳುವುದಿಷ್ಟೆ, ಯಾರನ್ನು ಯಾವಾಗ ಬೇಕಾದರೂ ಕರೆದು ಮಾತನಾಡುವಂಥ ಸರ್ವ ಶಕ್ತಿ ಮಾನ್ಯ ಅಧ್ಯಕ್ಷರಿಗೆ ಇದೆ. ಆದ್ದರಿಂದ ತಾವು ಈ ಬಗ್ಗೆ ಎಲ್ಲರನ್ನೂ ಕರೆಯಿಸಿ ಮಾತನಾಡುವುದಿದ್ದರೆ ಅದಕ್ಕೆ ಸರ್ಕಾರದ ಪತಿಯಿಂದ ನಮ್ಮ ಅಭ್ಯಂತರ ಏನೂ ಇಲ್ಲ. ಆದರೆ ಅವರು ಯಾವ ಸದನದಲ್ಲಿ ತಪ್ಪು ಮಾಡಿದ್ದಾರೋ, ಯಾವ ಸಭಾಪತಿಯವರ ಮುಂದೆ ಮಾಡಿದ್ದಾರೋ ಆ ತಪ್ಪನ್ನು ಅವರು ಮೊದಲು ಸರಿಪಡಿಸಿಕೊಳ್ಳಬೇಕು. ಅಲ್ಲಿ ಆದಂಥ ತಪ್ಪನ್ನು ಇಲ್ಲಿ ರಿಪೇರಿ ಮಾಡುವುದಕ್ಕೆ ಬರುವುದಿಲ್ಲ. ರಾಜ್ಯಾಂಗದ ಪ್ರಕಾರವಾಗಲೀ ಅಥವಾ ಬೇರೆ ನಿಯಮಗಳ ಪ್ರಕಾರವಾಗಲೀ ಅದು ಸಾಧ್ಯವಿಲ್ಲ. Constitutionally under rules, under any provision it is not possible. The remedy lies there. The cause of action has arisen there. ಆದ್ದರಿಂದ ಅವರು ಈ ಸದನಕ್ಕೆ ಬಂದು ಇಲ್ಲಿನ ಚರ್ಚೆಯಲ್ಲಿ ಭಾಗವಹಿಸಲಿ. ನಾವು ಅವರು ಬರುವುದು ಬೇಡ ಎಂದು ಹೇಳಿಲ್ಲ, ನಾವೇ ಹೋಗಿ ಅವರನ್ನು ಕರೆಯಲು ಅವರೇನು ನಮ್ಮ ಬೀಗರ ? ಅವರೂ ಸಹ ನಮ್ಮಂತೆಯೇ ಜನತೆಯಿಂದ ಆರಿಸಿ ಬಂದಿದ್ದಾರೆ. as a matter of right they can attend. ಲೋಕಸಭೆಯಲ್ಲಿ ನಮ್ಮ ಪಕ್ಷದ ಸದಸ್ಯರ ಮೇಲೆ ಏನಾದರೂ ಕ್ರಮ ತೆಗೆದುಕೊಂಡರೆ ನಾವು ಇಲ್ಲಿ ವಿರೋಧಪಕ್ಷದವರನ್ನು ಸಭೆ ಒಳಗಡೆ ಬಿಡುವುದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಇದು ಒಂದಕ್ಕೊಂದು ಸಂಬಂಧ ಇಲ್ಲದಿರುವ ವಿಚಾರವಾಗಿದೆ. ಇದು ಪಾರ್ಲಿಮೆಂಟರಿ ಚರಿತ್ರೆಯಲ್ಲಿಯೇ ನಡೆಯದಿರುವಂತಹ ವಿಚಾರವಾಗಿದೆ. ಅವರದ್ದು most irrelevant action, irresponsible action, ಇಂಥಾದ್ದನ್ನು ಯಾವ ರೀತಿ ಸರಿ ಮಾಡುವುದು ? ಅವರು ಈ ರೀತಿ ನಡೆದುಕೊಳ್ಳುತ್ತಿದ್ದರೂ ಸಹ ನಾವು ಸಂಯಮನಿದ್ದೇವೆ. ಅವರು ಏನೆಲ್ಲಾ ಪತ್ರಿಕೆಗಳಿಗೆ ಏನು ಬೇಕಾದರೂ ಹೇಳಿಕೆಗಳನ್ನೂ ಕೊಡಲಿ, ರಾಮಕೃಷ್ಣ ಹೆಗಡೆ ಅವರು ಸರ್ವಾಧಿಕಾರಿ, ಮುಹಮದ್ ಬಿನ್ ತೊಗಲಿಕ್ ತರಹ ರಾಜ್ಯವಾಳುತ್ತಿದ್ದಾರೆ ಎಂದೆಲ್ಲಾ ಬೇಕಾದರೆ ಹೇಳಿಕೆಗಳನ್ನು ಕೊಟ್ಟು ತಮ್ಮ ನಾಲಿಗೆ ಚಟವನ್ನು ತೀರಿಸಿಕೊಳ್ಳಲಿ. ಆದರೆ ಅವರು ಈ ಸದನಕ್ಕೆ ಮಾತ್ರ ಗೌರವ ಕೊಡಬೇಕಾಗುತ್ತದೆ. ಈ ಸದನಕ್ಕೆ ಕೊಟ್ಟಷ್ಟೇ ಗೌರವವನ್ನು ವಿಧಾನಪರಿಷತ್‌ಗೆ ಕೊಡಬೇಕಾಗುತ್ತದೆ. ಇದೇನೂ ಅವರ ಔಸಗೀ ವಿಷಯವಲ್ಲ. ಈ ಸಮಸ್ಯೆಯನ್ನು ಬಗೆಹರಿಸಲು ಆಳುವ ಪಕ್ಷ ಹಠ ಮಾಡುತ್ತಿಲ್ಲ. ಇದರಲ್ಲಿ ನಾವು ತೆರೆದ ಮನಸ್ಸಿನಿಂದ ಇದ್ದೇವೆ. ನಾವು ಅಷ್ಟು ಕ್ರೂರಿಗಳಲ್ಲ, ನಾವು ಈ ಸದನದ ಗೌರವಕ್ಕೆ ಹಾಗೂ ಈ ಪಾರ್ಲಿಮೆಂಟರಿ ಸಂಸ್ಥೆಗಳಿಗೆ ನಾವು ತಲೆ ಬಾಗುತ್ತೇವೆಯೇ ಹೊರತು ಅವರ ಪ್ರತ್ಯೇಕ್ಕಾಗಲೀ ಅವರಿಗಿರುವ ಶಕ್ತಿಗಾಗಲೀ ತಲೆ ಬಾಗುವುದಿಲ್ಲ. ಅವರು ಈ ವಿಷಯವನ್ನು ತೆಗೆದುಕೊಂಡು ಜನತೆಯ ಮುಂದೆ ಹೋದರೆ ನಾವೂ ಸಹ ಹೋಗುತ್ತೇವೆ ನಡೆದ ಸಂಗತಿಗಳನ್ನು ನಾವೂ ಜನತೆಗೆ ಹೇಳುತ್ತೇವೆ, ಇದು ನಮ್ಮ ದುರ್ಬಲತೆ ಎಂದು ಅವರು ತಿಳಿದುಕೊಂಡರೆ ಅದಕ್ಕೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಕೃಷ್ಣನ್ ಅವರಿಗೆ, ಮಾನ್ಯ ಯಡಿಯೂರಪ್ಪನವರಿಗೆ ಮತ್ತು ಮಾನ್ಯ ವೆಂಕಟರಾವಯ್ಯನವರಿಗೆ ಈ ಪಾರ್ಲಿಮೆಂಟರಿ ಸಂಸ್ಥೆಗಳ ಬಗ್ಗೆ ಅಪಾರವಾದಂಥ ಗೌರವ ಇದೆ. ಆದ್ದರಿಂದ ಅವರುಗಳು ಹೋಗಿ ಹೊರಗಿರುವವರನ್ನು ಕರೆದುಕೊಂಡು ಬರಲಿ. ಅದಕ್ಕೂ ಮೊದಲು

ಅವರು ಮೊದಲು ತಮ್ಮ ತಪ್ಪನ್ನು ತಿದ್ದುಕೊಳ್ಳಲಿ, ತಮ್ಮ ತಪ್ಪನ್ನು ಸರಿಪಡಿಸಿಕೊಳ್ಳಲಿ. ಇದರ ಜೊತೆಗೆ ತಾವು ಈ ಬಗ್ಗೆ ಮಾತುಕತೆ ನಡೆಸಲು ಯಾವಾಗ ಕರೆದರೂ ಸಹ ಸರ್ಕಾರದ ವತಿಯಿಂದ ನಾವು ಖಂಡಿತವಾಗಿ ಬರುತ್ತೇವೆ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಪಟೇಲ್ ಅವರ ವಾಕ್‌ಚಾತುರ್ಯ ಬಹಳ ಚೆನ್ನಾಗಿದೆ. ಮಾನ್ಯ ಪಟೇಲ್ ಅವರ ಮಾತಿಗೆ ಆಡಳಿತ ಪಕ್ಷದ ಸದಸ್ಯರು ಕೈಚಪ್ಪಾಳೆ ತಟ್ಟಿದರು. ಆದರೆ ಈ ಬಗ್ಗೆ ನಾನೂ ಹೇಳುವುದಿಷ್ಟೆ. ಮಾನ್ಯ ಪಟೇಲ್ ಅವರು ಕಡೆಯಲ್ಲಿ ಒಂದು ಮಾತನ್ನು ಹೇಳಿದರು ಏನೆಂದರೆ, ನಾವೇ ಪ್ರಯತ್ನ ಪಡಿ ಅವರನು ಕರೆದುಕೊಂಡು ಬರಬೇಕು ಇಲ್ಲದಿದ್ದರೆ ಮಾನ್ಯ ಅಧ್ಯಕ್ಷರು ಮಾತುಕತೆಗೆ ಕರೆದರೆ ಆಡಳಿತ ಪಕ್ಷದ ಕಡೆಯಿಂದ ಬರುತ್ತೇವೆ ಎಂದು ಹೇಳಿದರು. ಈ ಮಾತನ್ನು ಹೇಳುವುದಕ್ಕೆ ಮೊದಲು ಅವರು ಬೇಕಾದಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಿದರು. ಪೆರಿಟ್‌ಗೆ ಸಂಬಂಧಪಟ್ಟ ವಿಷಯಗಳನ್ನು ಪ್ರಸ್ತಾಪ ಮಾಡಿದರು. ಕೆಲವು ಅಸಂಗತ ವಿವರಗಳನ್ನು ಅವರ ಬಗ್ಗೆ ಪ್ರಸ್ತಾಪ ಮಾಡಿದರು. ಅವರೆದ್ದ most irrelevant action, irresponsible action, ಎಂದೆಲ್ಲಾ ಹೇಳಿದರು. ಆ ರೀತಿ ಹೇಳುವುದಕ್ಕೆ ಇವರಿಗೆ ಅಧಿಕಾರ ಇದೆಯೇ? ಅವರು ಸರಿಯಾಗಿ ನಡೆದು ಕೊಂಡಿಲ್ಲ ಎಂದು ಬೇಕಾದರೆ ಹೇಳಬಹುದು.

ಅಧ್ಯಕ್ಷರು — ಈ ಸಮಸ್ಯೆಯನ್ನು ಬಗೆಹರಿಸಲು ನಾನು ಪ್ರಯತ್ನ ಮಾಡಿದರೆ ಅದಕ್ಕೆ ತಮ್ಮ ಅನುಮತಿ ಇದೆ ಎಂದು ಅವರು ಹೇಳಿದರು.

ಶ್ರೀ ಎಂ. ಎಸ್. ಕೃಷ್ಣನ್.—ನಾನು ತಮ್ಮ ಮೂಲಕ ಮಾನ್ಯ ಪಟೇಲರಿಗೆ ಮತ್ತು ಆ ಸದನದ ಸದಸ್ಯರಿಗೆ ಹೇಳುವುದು ಇಷ್ಟೆ. ಈ ರೀತಿ ಮಾತನಾಡುವುದರಿಂದ ಪ್ರಶ್ನೆ ಇತ್ಯರ್ಥವಾಗುವುದಿಲ್ಲ. ಪ್ರಶ್ನೆ ಇತ್ಯರ್ಥವಾಗಬೇಕು ಎನ್ನುವ ಅಭಿಪ್ರಾಯ ನಮ್ಮಲ್ಲಿದೆ. ನಾವೂ ಕೂಡ ಪಟೇಲರ ಜೊತೆಯಲ್ಲಿ ಅವರು ಹೇಳಿದಂಥ ಕೆಲವು ಅಭಿಪ್ರಾಯಗಳನ್ನು ಒಪ್ಪಿಕೊಳ್ಳುವಂಥ ಜನ. ಪ್ರಜಾಪ್ರಭುತ್ವಕ್ಕೆ ಮನ್ನಣೆ ನೀಡಬೇಕೂ, ಅವರು ಈಗ ಆ ರೀತಿ ಮಾಡಬೇಕಾಗಿರಲಿಲ್ಲ ಎಂದು ಹೇಳಿದರು.

ಅಧ್ಯಕ್ಷರು.—ಮಾನ್ಯ ಪಟೇಲರು ಕೊನೆಗೆ ಒಂದು ಸೆಂಟೆನ್ಸ್ ಹೇಳಿದರು ನೋಡಿ. ಆದಾಗ್ಯೂ ಇದನ್ನು ಬಗೆಹರಿಸಲು ತಾವು ಏನಾದರೂ ಪ್ರಯತ್ನ ಮಾಡಿದರೆ ನಮ್ಮ ಅಭ್ಯಂತರವಿಲ್ಲ ಎಂದು ಹೇಳಿದ್ದಾರೆ. ಅದರ ಬಗ್ಗೆ ಹೇಳಿ.

ಶ್ರೀ ಎಂ. ಎಸ್. ಕೃಷ್ಣನ್.—ಹೇಳಿದ್ದನ್ನೇ ಹೇಳಿಕೊಂಡು ಹೋಗಿ ಅವರು ಹಾಗೆ ಮಾಡಿದರು, ಅವರು ತಪ್ಪು ಮಾಡಿದ್ದಾರೆ, ಅಸಭ್ಯ ವರ್ತನೆಯಾಗಿದೆ, ಅವರು ಬಂದು ಕಾಲಿಮೇಲೆ ಬೀಳಲಿ, ಅವರು ಬಂದು ಮಾತನಾಡಲಿ, ಇವರು ಏಕೆ ಹೋಗಬೇಕು ಎನ್ನುವ ರೀತಿಯಲ್ಲಿ ಮಾತನಾಡಿದರೆ ಪ್ರಶ್ನೆ ಇತ್ಯರ್ಥವಾಗುವುದಿಲ್ಲ. ಜವಾಬ್ದಾರಿಯುತವಾಗಿ, ನಾಯಕರಾಗಿ, ಮಂತ್ರಿಯಾಗಿ ಮಾತನಾಡಿ ಈ ಪ್ರಶ್ನೆ ಇತ್ಯರ್ಥವಾಗುತ್ತದೆ.

ಶ್ರೀ ಜೆ. ಹೆಚ್. ಪಟೇಲ್.—ನನ್ನ ಭಾಷಣವನ್ನು ವಿಶ್ಲೇಷಣೆ ಮಾಡುವುದು ಬೇಡ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಮಾತನಾಡುವುದನ್ನು ಕೇಳಿ, ನೀವು ಮಾತನಾಡಿದ್ದನ್ನು ನಾನು ಕೇಳಿದೆ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಕೃಷ್ಣನ್‌ರವರು ಈ ಸಮಸ್ಯೆಗೆ ಪರಿಹಾರವನ್ನು ಕಂಡು ಹಿಡಿಯಲಿ. ನಾನು ಅವರ ಬಗ್ಗೆ ಹೇಳಿದ್ದನ್ನು ಇವರು ವಿಶ್ಲೇಷಣೆ ಮಾಡುವ ಅನಶ್ಯಕತೆ ಇಲ್ಲ, ದಯವಿಟ್ಟು ಆ ದಿಸೆಯಲ್ಲಿ ಪ್ರಯತ್ನ ನಡೆಯಲಿ.

ಅಧ್ಯಕ್ಷರು.—ಈಗ ಸಮಸ್ಯೆ ಬಗೆಹರಿಸಲು ನಾನು ಮಾಡಬೇಕು ಎಂದು ಹೇಳಿ. ಮೊದಲು ಸಲಹೆ ಕೊಟ್ಟರಲ್ಲ ಆ ಪ್ರಕಾರ ಏನು ಮಾಡಬೇಕು ಹೇಳಿ?

ಶ್ರೀ ಎಂ. ಎಸ್ ಕೃಷ್ಣನ್.—ನಾನು ಒಂದು ಮಾತು ಹೇಳುವುದೇನೆಂದರೆ ಆ ಕಡೆ ಈ ರೀತಿಯ ಮನೋಭಾವ ಸ್ವಲ್ಪ ಬದಲಾವಣೆ ಆಗಬೇಕು. ಒಂದು ಪಕ್ಷ ನೀವೇ ಅವರನ್ನು ಕರೆಯುತ್ತೀರಿ, ಕರೆ

ದಾಗಲೂ ಕೂಡ ಇದೇ ಅಭಿಪ್ರಾಯ ಇಟ್ಟುಕೊಂಡರೆ ಪ್ರಶ್ನೆ ಇತ್ಯರ್ಥ ಆಗಂವುದಿಲ್ಲ. ಕೊಡುವುದು ಇರಬೇಕು, ತೆಗೆದುಕೊಳ್ಳುವುದು ಇರಬೇಕು. ಪ್ರಜಾಪ್ರಭುತ್ವದಲ್ಲಿ ಎರಡು ಪಕ್ಷಗಳು ಇರಬೇಕು, ಒಂದು ದೊಡ್ಡ ಪಕ್ಷ ಆ ಕಡೆ ಇದೆ. ಈ ರೀತಿ ಇರಬೇಕಾದರೆ ಕೊಡುವುದು ಇರಬೇಕು, ತೆಗೆದು ಕೊಳ್ಳುವುದು ಇರಬೇಕು. ಈ ರೀತಿಯಾಗಿ ಯೋಚನೆ ಮಾಡಬೇಕೇ ವಿನಹ ಅವರನ್ನು ಕುಚೋದ್ಯವಾಗಿ ಮಾತನಾಡುವುದನ್ನು ಕಡಿಮೆ ಮಾಡಬೇಕು. ಅದನ್ನೇ ಜಾಸ್ತಿ ಮಾಡಿದರೆ ಪ್ರಶ್ನೆ ಹೇಗೆ ಇತ್ಯರ್ಥ ಆಗಬೇಕು ? ಆ ರೀತಿ ಮಾತನಾಡಬೇಡಿ ಎಂದು ನಾವು ತಮ್ಮಲ್ಲಿ ಕೇಳಿಕೊಳ್ಳುವುದು. ಮೂರನೆಯಂದಾಗಿ, ಇವತ್ತಿನ ದಿವಸ ಅವರು ಹೊರಗೆ ಕಂಳಿತುಕೊಂಡಿರುವುದು, ಅದು ಅವರ ಇಷ್ಟ. ನಾನು ಅವರಿಗೆ ಹೇಳುವುದಕ್ಕೆ ಹೋಗುವುದಿಲ್ಲ. ನಾನು ಬಿಟ್ಟು ಬಿಡಿ ಈ ರೀತಿ ಮಾಡಬೇಡಿರಿ ಎಂದು ಹೋಗಿ ಹೇಳುವುದಕ್ಕೆ ತಯಾರಾಗಿಲ್ಲ, ಹೇಳುವುದೂ ಇಲ್ಲ. ಅವರ ಇಷ್ಟ ಏನು ಬೇಕಾದರೂ ಮಾಡಿಕೊಳ್ಳಲಿ ಏಕೆಂದರೆ, ಅವರು ನಮ್ಮನ್ನು ಕೇಳಿ ಹೊರಗೆ ಹೋಗಿಲ್ಲ, ನಮ್ಮನ್ನುಕೇಳಿಕೊಂಡು ಹೊರಗೆ ಹೋಗಿ ಕಂಳಿತುಕೊಂಡಿಲ್ಲ.

ಶ್ರೀ ವೇದಾಂತ ಹೆಬ್ಬಿಗೆ.—ನಮ್ಮನ್ನು ಕೇಳಿ ಹೊರಗೆ ಹೋದರೆ ? ನಮ್ಮನ್ನು ಕೇಳಿ ಹೊರಗೆ ಹೋಗಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನಿಮ್ಮನ್ನು ಧಿಕ್ಕರಿಸಿ ಹೋಗಿದ್ದಾರೆ, ಯಾರನ್ನು ಕೇಳಿ ಹೋಗಿಲ್ಲ.

ಅಧ್ಯಕ್ಷರು.—ಮಾನ್ಯ ಪಟೇಲರು ಆದಾಗ್ಯೂ ಎಂದು ಹೇಳಿದ್ದಾರೆ, ನೀವು ಏನು ಮಾಡಬೇಕ ಎಂದು ಹೇಳಿ ?

ಶ್ರೀ ಎಂ. ಎಸ್. ಕೃಷ್ಣನ್.—ನನ್ನ ಸೂಚನೆ ಇಷ್ಟೆ. ತಾವು ದೊಡ್ಡ ಮನಸ್ಸು ಮಾಡಿ ಎಲ್ಲರನ್ನೂ ಕರೆಯಿರಿ, ಮೇಲ್ಮನೆಯವರನ್ನೂ ಕರೆಯಿರಿ, ಇವರನ್ನೂ ಕರೆಯಿರಿ, ಕರೆಯಿಸಿ ಕುಳಿತುಕೊಂಡು ಚರ್ಚೆ ಮಾಡಿ ಸಮಸ್ಯೆಯನ್ನು ಇತ್ಯರ್ಥ ಮಾಡುವುದಕ್ಕೆ ಪ್ರಯತ್ನ ಮಾಡೋಣ. ಇಲ್ಲದೇ ಇದ್ದರೆ ಅವರಿಗೆ ಇಷ್ಟ ಬಂದಹಾಗೆ ಮಾಡಿಕೊಂಡು ಹೋಗಲಿ. ಈಗ ಇದೂ ಒಂದೂ ದಾರಿ. ಬೇರೆ ದಾರಿ ಇಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ ಈಗ ಇವರ ಅಪ್ರೋಚ್ ಸರಿಯಿಲ್ಲ. ಇವರು ಅವರನ್ನು ಇರ್ರೆಸ್ಪಾನ್ಸಿಬಲ್ ಎಂದು ಹೇಳುತ್ತಾರೆ, ಇದನ್ನೆಲ್ಲಾ ಆವರ ಮುಂದೆ ಹೇಳಲಿ. ಒಂದೂ ಡೈಲಾಗ್ ಕಮೆನ್ಸ್ ಆಗಲಿ ಕಮೆನ್ಸ್ ಆದರೆ ಸೆಟಲ್ ಆಗುವುದಕ್ಕೆ ಛಾನ್ಸಸ್ ಉಂಟು. ಇರ್ರೆಸ್ಪಾನ್ಸಿಬಲ್, ನಮ್ಮನ್ನು ಕೇಳಿ ಹೋಗಲಿಲ್ಲ, ಇಲ್ಲಿ ಸಮಸ್ಯೆ ಇಲ್ಲ ಎಂದು ಹೇಳಿ ಬಿಟ್ಟರೆ ಅದು ಸರಿ ಹೋಗುವುದಿಲ್ಲ. ಮೇಲ್ಮನೆಯಲ್ಲಿ ಸಮಸ್ಯೆ ಇರಬಹುದು ಅಲ್ಲಿ ಸಮಸ್ಯೆ ಇದ್ದರೂ ಕುಳಿತ್ತುಕೊಂಡು ಮಾತನಾಡಿ. ಒಂದು ಡೈಲಾಗ್ ಕಮೆನ್ಸ್ ಆದರೆ ಡೆಫನೆಟ್ಟಾಗಿ ಈ ಸಮಸ್ಯೆ ಸೆಟಲ್ ಆಗುವುದಕ್ಕೆ ಛಾನ್ಸಸ್ ಉಂಟು. ಜೊತೆಗೆ ಸ್ಟೇಟ್ ಸೈಡರ್ಸ್, ಮಾನ್ಯ ಪೂಜಾರಿಯವರು ಇಂಟರ್‌ಫಿಯರ್ ಆಗುವ ಹಾಗೆ ಮಾಡಿದ್ದೇವೆ. ಅದಕ್ಕೆ ಅವಕಾಶ ಕೊಡುವುದಂ ಬೇಡ ನಮ್ಮ ಸಮಸ್ಯೆ ನಮ್ಮಲ್ಲಿ ಇತ್ಯರ್ಥವಾಗಲಿ. ಇವರು ಗವರ್ನಮೆಂಟ್‌ನವರಂ ಅವರು ಆಪೊಸಿಷನ್‌ನವರಂ. ತಾವು ಸ್ವಲ್ಪ ಸೋತರೆ ಪ್ರತಿಷ್ಠೆ ಕಡಿಮೆಯಾಗುವುದಿಲ್ಲ ಪ್ರಜಾಪ್ರಭುತ್ವದ ನಡವಳಿಕೆ ದೃಷ್ಟಿಯಿಂದಾದರೂ ನಮ್ಮ ಸ್ನೇಹಿತರು ಸ್ವಲ್ಪ ಇರ್ರೆಸ್ಪಾನ್ಸಿಬಲ್ ಆಗಿದ್ದರೂ ಅವರನ್ನು ಕರೆಯಿಸಿ ಮಾತನಾಡಿ. ಅದಕ್ಕೆ ತಾವೇ ಇನಿಷಿಯೇಟೀವ್ ತೆಗೆದುಕೊಳ್ಳಿ. ಲೆಜಿಸ್ಲೇಟೀವ್ ಕೌನ್ಸಿಲ್‌ನಲ್ಲಿ ಸಮಸ್ಯೆ ಇದ್ದರೂ ಅದು ಇಲ್ಲಿ ರಿಫ್ಲೆಕ್ಟ್ ಆಗಿದ್ದರೂ ಕೂಡ ಮಾಡದೇಹೋದರೆ ಇಲ್ಲಿ ನಮಗೆ ತೊಂದರೆಯಾಗಿದೆ. ಇದು ನ್ಯಾಯವಲ್ಲ. ದಯವಿಟ್ಟು ತಾವು ಇನಿಷಿಯೇಟ್ ತೆಗೆದುಕೊಳ್ಳಬೇಕು. ಇವರು ಕೂಡ ಇರ್ರೆಸ್ಪಾನ್ಸಿಬಲ್ ಆವರು ನೋದಿರಂವುದು ಸರಿ ಇಲ್ಲ ಎಂದು ಹೇಳುವುದು ಬೇಡ. ದಯವಿಟ್ಟು ಅವರನ್ನು ಕರೆಸಿ ಒಂದು ಸೆಟಲ್‌ಮೆಂಟ್ ಮಾಡುವುದಕ್ಕೆ ಅವಕಾಶ ಮಾಡಬೇಕು.

೧೧–೩೦ ಎ. ಎಂ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ಜನತಾ ಪಾರ್ಟಿಯ ಮಂಖಂಡರು ಈ ಸಮಸ್ಯೆ ಬಗ್ಗೆ ಬಗೆಹರಿಸಬಾರದು ಎನ್ನುವಂಥ ವಿಚಾರ ಇಟ್ಟುಕೊಂಡಿದ್ದಾರೆಂದು ನಮಗೆ ಅನ್ನಿಸುವುದಿಲ್ಲ.

*** ***

* * * ಅಧ್ಯಕ್ಷರ ಆದೇಶದ ಮೇರೆಗೆ ತೆಗೆದು ಹಾಕಲಾಗಿದೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮೊದಲನೆಯದಾಗಿ ಆ ಮನೆಯ ನಡುವಳಿಕೆಯನ್ನು ಈ ಮನೆಯಲ್ಲಿ ಪ್ರಶ್ನೆ ಮಾಡತಕ್ಕದ್ದು ಸರಿಯಲ್ಲ. ಮತ್ತೆ ಆ ಮನೆಯ ನಡುವಳಿಕೆಗೆ ತದ್ವಿರುದ್ಧವಾಗಿ ಇಲ್ಲಿ ಮಾತನಾಡತಕ್ಕದ್ದು ಸರಿಯಲ್ಲ. I request you not to allow anything on that. What happened there hon. Member Sri Yediurappa knows and he has no right to discuss about it.

ಶ್ರೀ ಬಿ.ಎಸ್. ಯಡಿಯೂರಪ್ಪ.—ಅದರ ಬಗ್ಗೆ ಈಗ ನಾನು ಚರ್ಚೆ ಮಾಡಲಿಕ್ಕೆ ಹೋಗುವುದಿಲ್ಲ.

SRI ABDUL NAZIR SAB.—Mr. Speaker, Sir, I request you to expunge that. What happened in that House, is not truth at all. It is a reflection on the Chair of that House. What he has said about the Chair of that House I want that it should be expunged.

ಶ್ರೀ ಅಬ್ದುಲ್ ನಜೀರ್ ಸಾಬ್.—ತಾವು ಚರ್ಚೆ ಮಾಡಲಿಕ್ಕೆ ಹೋಗುವುದು ಸಾಧುವಾದುದು ಅಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಆಯಿತು ಸ್ವಾಮಿ, ಅದನ್ನು ಎಕ್ಸ್‌ಪಂಜ್ ಮಾಡಿಸಿ.

MR. SPEAKER.—I will expunge it.

ಶ್ರೀ ಬಿ.ಎಸ್. ಯಡಿಯೂರಪ್ಪ.—ಇವೊತ್ತಿನ ದಿವಸ ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಪ್ರಜಾತಂತ್ರದ ಬಗ್ಗೆ ಉಚ್ಚ ಮೌಲ್ಯದ ಬಗ್ಗೆ ನಾವೆಲ್ಲಾ ಇಲ್ಲಿ ಮಾತನಾಡುತ್ತೇವೆ. ಏನೋ ಒಂದು ಘಟನೆ ನಡೆದಿದೆ ಈ ಸಂದರ್ಭದಲ್ಲಿ ಇಲ್ಲಿರುವಂಥ ವಿರೋಧ ಪಕ್ಷದ ಸದಸ್ಯರು ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಏನು ಸಲಹೆ ಕೊಡುತ್ತಾರೆ ಅದನ್ನು ಸನ್ಮಾನ್ಯ ಮುಖ್ಯ ಮಂತ್ರಿಗಳು ಈ ಸದನದಲ್ಲಿ ಹಾಜರಿದ್ದು ಕೇಳಬೇಕಾಗಿತ್ತು. ಹೊರಗಡೆ ಇದಕ್ಕಿಂತಲೂ ಮಹತ್ವವಾದ ಕೆಲಸ ಬೇರೆ ಯಾವುದು ಇದೆ ? ಏನಾದರೂ ಸಮಸ್ಯೆ ಇದ್ದರೆ, ಇಲ್ಲಿ ಕುಳಿತುಕೊಂಡು ಸಲಹೆಗಳನ್ನು ತೆಗೆದು ಕೊಂಡು ಸಮಸ್ಯೆಯನ್ನು ಬಗೆಹರಿಸುವ ಪ್ರಯತ್ನ ಮಾಡಬೇಕು. ಇವೊತ್ತು ಯಾವುದೋ ಒಂದು ಪ್ರತಿಷ್ಠೆಗೆ ಅಂಟಿಕೊಳ್ಳಬಾರದು. ಏನೋ ಆಗಬಾರದ ಘಟನೆ ನಡೆದುಹೋಗಿದೆ. ಬೇಷರತ್ತಾಗಿ ಸಸ್ಪೆಂಡ್ ಮಾಡಿರುವುದನ್ನು ವಾಪಸ್ಸು ತೆಗೆದುಕೊಳ್ಳಿ, ಇದರಿಂದ ನಿಮ್ಮ ಗೌರವ ಜಾಸ್ತಿಯಾಗುತ್ತದೆ. ದಯವಿಟ್ಟು ತಾವು ಆ ಕೆಲಸ ಮಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ಈಗ ಪ್ರಶ್ನೋತ್ತರ ಕಾಲ ಇದೆ ಈಗ ಪ್ರಶ್ನೋತ್ತರಗಳು ಆಗಲಿ, ಇದು ಆದಮೇಲೆ ಅರ್ಧ ಗಂಟೆ ಈ ವಿಷಯವನ್ನು ಮುಂದೆ ಹಾಕಿ. ಆವರು ಮಾತುಕತೆಗೆ ಕಾಂಗ್ರೆಸ್ ಮುಖಂಡರನ್ನು ಕರೆದುಕೊಂಡು ಬಂದರೆ ಮಾತನಾಡಲಿಕ್ಕೆ ಆಗುತ್ತದೆ.

ಅಧ್ಯಕ್ಷರು.—ಪ್ರಶ್ನೋತ್ತರಗಳು ಆದಮೇಲೆ ಮಾಡೋಣ.

ಶ್ರೀ ಅಬ್ದುಲ್ ನಜೀರ್ ಸಾಬ್.—ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಮುಖ್ಯ ಮಂತ್ರಿಗಳಿಗೆ ಈ ಸಭೆಗೆ ಹಾಜರಾಗುವುದಕ್ಕಿಂತಲೂ ಮಹತ್ವವಾದ ಕಾರ್ಯ ಯಾವುದು ಇದೆ ಎಂದು ಹೇಳಿದರು. ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಗೆ ಹಾಜರಾಗದೇ ಇರುವಂಥ ಮಹತ್ವವಾದ ಕಾರ್ಯ ಯಾವುದೂ ಇಲ್ಲ. ಅವರಿಗೆ ಆರೋಗ್ಯ ಚೆನ್ನಾಗಿಲ್ಲ ಎಂದು ನಮಗೆ ಗೊತ್ತಿದೆ. ಅವರಿಗೆ ಜ್ವರ ಬಂದಿರುವುದರಿಂದ ಈ ಸಭೆಗೆ ಬಂದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಅದನ್ನು ತಾವು ನಮ್ಮ ಗಮನಕ್ಕೂ ತರಬೇಕು.

ಚುಕ್ಕೆಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿಮಾತಿನ ಉತ್ತರಗಳು

ಅಧ್ಯಕ್ಷರು.—ಪ್ರಶ್ನೆ ೭೫೫. ಶ್ರೀ ಚಂದ್ರಶೇಖರ್ ಮಾಮನಿ ಅವರ ಪ್ರಶ್ನೆಯನ್ನು ಮುಂದಕ್ಕೆ ಹಾಕಿದ್ದೇನೆ.